ಇ) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ 3701 ಖಾಯಂ ಬೋಧಕ / ಬೋಧಕೇತರ ಸಿಬ್ಬಂದಿಗಳು ಕಾಯ್ನಿರ್ವಹಿಸುತ್ತಿದ್ದಾರೆ. ವಸತಿ ಶಾಲೆ ಗಳಲ್ಲಿ ಕೊರತೆ ಇರುವ ಬೋಧಕ / ಬೋಧಕೇತರ ಸಿಬ್ಬಂದಿಗಳನ್ನು ಭರ್ತಿ ಮಾಡಿಕೊಳ್ಳಲು ಈ ಕೆಳಕಂಡಂತೆ ಕ್ರಮವಹಿಸಿದೆ.

ಅ) ಶಿಕ್ಷಣ ಇಲಾಖೆ ಮಾದರಿಯಲ್ಲಿ ಖಾಲಿ ಇರುವ ಶಿಕ್ಷಕರುಗಳ ಹುದ್ದೆಗೆ ಅತಿಥಿ ಶಿಕ್ಷಕರುಗಳನ್ನು / ಹೊರ ಸಂಪನ್ಮೂಲಕ ಶಿಕ್ಷಕರುಗ ಳನ್ನು ನೇಮಕ ಮಾಡಿಕೊಳ್ಳಲಾಗಿದೆ.

ಆ) ಬೋಧಕೇತರ ಸಿಬ್ಬಂದಿಗಳು ಅಂದರೆ ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತಾ ಸಿಬ್ಬಂದಿ, ಕಾವಲುಗಾರರು, ಗ್ರೂಪ್ ಡಿ ನೌಕರ ರುಗಳ ಸಿಬ್ಬಂದಿಗಳ ಹುದ್ದೆಗಳನ್ನು ಆರ್ಥಿಕ ಇಲಾಖೆ ಅನುಮೋದಿ ಸಿದಂತೆ ಹೊರಸಂಪನ್ಮೂಲದಿಂದ ತಾತ್ಕಾಲಿಕವಾಗಿ ಭರ್ತಿಮಾಡಿಕೊಳ್ಳ ಲಾಗುತ್ತಿದೆ.

ಅಡುಗೆ ಗ್ಯಾಸ್ ಪೈಪ್‌ಲೈನ್ ಮೂಲಕ ಸರಬರಾಜು

1640 (1820); ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ

ಅ) ಕರ್ನಾಟಕ ಹುಬ್ಬಳ್ಳಿ–ಧಾರವಾಡ ಮಹಾನಗರವು ಎರಡನೇಯ ದೊಡ್ಡ ಮಹಾನಗರ ಆಗಿದ್ದು, ಹುಬ್ಬಳ್ಳಿ–ಧಾರವಾಡ ಮಹಾನಗರಕ್ಕೆ ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ 'ಅಡಿಗೆ ಗ್ಯಾಸ್'ನ್ನು ಪೈಪ್‌ಲೈನ್ ಮೂಲಕ ಸರಬರಾಜು ಮಾಡುವ ಯೋಜನೆಯು ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆ ಯಾವಾಗ ಪ್ರಾರಂಭ ಮಾಡಲಾಗುವುದು;

ಇ) ಇಲ್ಲವಾದಲ್ಲಿ, ಈ ಯೋಜನೆಯನ್ನು ಹಂತ ಹಂತವಾಗಿ ಪ್ರಾರಂಭಿಸ ಲಾಗುವುದೆ?

ಶ್ರೀ ಆರ್. ರೋಷನ್ ಬೇಗ್ (ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಹಜ್ ಸಚಿವರು)

ಅ) ರಾಜ್ಯದ ಪ್ರಮುಖ ನಗರಗಳಲ್ಲಿ ನೈಸರ್ಗಿಕ ಅನಿಲದ ಸರಬರಾಜು ಮಾಡಬೇಕೆಂಬುದು ಸರ್ಕಾರದ ಇಚ್ಛೆಯಾಗಿದೆ. ನಗರ ಸರಬರಾಜು ಯೋಜನೆಯು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನ್ಯಾಚುರಲ್ ಗ್ಯಾಸ್ ರೆಗ್ಯುಲೇಟರಿ ಬೋರ್ಡ (ಪಿ. ಎನ್. ಜಿ. ಆರ್. ಬಿ) ರವರಿಂದ ಟೆಂಡರ್ ಕರೆದು ಪ್ರಧಾನ ಮಾಡುವ ಅಧಿಕಾರ ಹೊಂದಿರುತ್ತದೆ. ಸದ್ಯಕ್ಕೆ ಪಿ. ಎನ್. ಜಿ. ಆರ್. ಬಿ. ಯು ಬೆಂಗಳೂರು ವಲಯಕ್ಕೆ ಟೆಂಡರ್ ಕರೆದಿರುತ್ತಾರೆ. ಉಳಿದ ನಗರ ವಲಯಗಳಿಗೂ ಟೆಂಡರ್ ಗಳನ್ನು ಪಿ.ಎನ್.ಜಿ.ಆರ್.ಬಿ.ಯು. ಕರೆಯುವ ಯೋಜನೆಯನ್ನು ಹೊಂದಿರುತ್ತದೆ.

ಆ) ಪಿ.ಎನ್.ಜಿ.ಆರ್.ಬಿ.ಯು ಟೆಂಡರ್‌ಗಳನ್ನು ಕರೆದು, ಪ್ರಧಾನ ಮಾಡಿದ ನಂತರ, ಯಶಸ್ವಿ ಬಿಡ್ಡರ್ಸ್ ಯೋಜನೆಯನ್ನು ಅನುಷ್ಠಾನಗೊಳಿಸುತ್ತಾರೆ.

ಇ) ಈ ಯೋಜನೆಯನ್ನು ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುತ್ತದೆ. ಹಂತಗಳ ವಿವರಗಳನ್ನು ಪಿ.ಎನ್.ಜಿ.ಆರ್.ಬಿ.ಯು ಟೆಂಡರ್ ನಲ್ಲಿ ನಮೂದಿಸುತ್ತದೆ.

ಪಡಿತರ ಚೀಟಿ ವಿತರಣೆ

1641 (2389); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ರಾಜ್ಯದಲ್ಲಿರುವ ಒಟ್ಟು ಪಡಿತರ ಚೀಟಿದಾರರ ಸಂಖ್ಯೆ ಎಷ್ಟು; (ಎಲ್ಲಾ ಪಡಿತರ ಚೀಟಿದಾರರ ವಿವರಗಳನ್ನು ಜಿಲ್ಲಾವಾರು ನೀಡುವುದು);

ಆ) ಕಳೆದ ಒಂದು ವರ್ಷದಿಂದ ವಿತರಿಸಿರುವ ಹೊಸ ಪಡಿತರ ಚೀಟಿಗಳೆಷ್ಟು (ಎಲ್ಲಾ ಪಡಿತರ ಚೀಟಿಗಳ ವಿವರಗಳನ್ನು ಜಿಲ್ಲಾವಾರು ನೀಡುವುದು);

ಇ) ರಾಜ್ಯದಲ್ಲಿ ಹೊಸ ಪಡಿತರ ಚೀಟಿ ಕೋರಿ ಮೇ ಅಂತ್ಯದವರೆಗೆ ಬಂದಿರುವ ಅರ್ಜಿಗಳೆಷ್ಟು ಈ ಪೈಕಿ ಎಷ್ಟು ಪಡಿತರ ಚೀಟಿ ವಿತರಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು);